

## 4 ಕ್ಯಾನ್ಸರ್ ಪತ್ತೆಗೆ ನ್ಯಾನೋ ಮೂಗು

ಒಬ್ಬ ವ್ಯಕ್ತಿ ಹೊರ ಬಿಡುವ ಉಸಿರಿನಲ್ಲಿ ಲಕ್ಷಾಂತರ ಸೂಕ್ಷ್ಮಜೀವಿಗಳು ಇರುತ್ತವೆ. ಅದರಲ್ಲಿ ಒಳ್ಳೆಯದು ಯಾವುದು, ಹಾನಿಕಾರಕ ಯಾವುದು ಎಂಬುದನ್ನು ಪತ್ತೆ ಮಾಡಲು ಸದ್ಯವೇ 'ನ್ಯಾನೋ ಮೂಗು' (ನ್ಯಾನೋ ನೋಸ್) ಅಭಿವೃದ್ಧಿಯಾಗಲಿದೆ.

ಇಸ್ರೇಲ್ ವಿಜ್ಞಾನಿಗಳು ಕ್ಯಾನ್ಸರ್ ಪತ್ತೆ ಮಾಡಲು ನ್ಯಾನೋ ಮೂಗನ್ನು ಸೃಷ್ಟಿಸುವ ಕಾರ್ಯದಲ್ಲಿ ತೊಡಗಿದ್ದಾರೆ. 'ಈ ಕಲ್ಪನೆಯೇ ಅದ್ಭುತ' ಎನ್ನುತ್ತಾರೆ ಖ್ಯಾತ ವಿಜ್ಞಾನಿ ಡಾ.ಸಿ.ಎನ್.ಆರ್ ರಾವ್. 'ಕಳೆದ ವರ್ಷ ಕೆಲವು ಇಸ್ರೇಲಿ ವಿಜ್ಞಾನಿಗಳು ನನ್ನನ್ನು ಭೇಟಿ ಮಾಡಿದ್ದರು. ಸ್ತನ ಕ್ಯಾನ್ಸರ್ ಪತ್ತೆ ಮಾಡಲು ನ್ಯಾನೋ ಮೂಗು ಅಭಿವೃದ್ಧಿಪಡಿಸುವ ಬಯಕೆಯನ್ನು ಅವರು ವ್ಯಕ್ತಪಡಿಸಿದರು. ಇದು ಸಾಧ್ಯವೇ ಎಂದು ಕೆಲವರು ಪ್ರಶ್ನಿಸಬಹುದು. ಕೆಲವರಿಗೆ ಇದು ಜೋಕ್ ಎನಿಸಿರಬಹುದು. ಆದರೆ, ಇದು ಖಂಡಿತಾ ಜೋಕ್ ಅಲ್ಲ, ವಾಸ್ತವ' ಎಂದು ಹೇಳುತ್ತಾರೆ ರಾವ್.

## 5 ಪಾದರಕ್ಷೆ ವಾಸನೆ ತಡೆಗೆ ಕೋಳಿ ಪುಕ್ಕ

ನಮ್ಮಲ್ಲಿ ಕೋಳಿ ತಿನ್ನುವವರ ಸಂಖ್ಯೆ ಒಂದೇ ಸಮನೆ ಏರುತ್ತಿದೆ. ಕೋಳಿಗಳ ಪುಕ್ಕ, ತುಪ್ಪಳ ಎಲ್ಲೆಂದರಲ್ಲಿ ಹರಡಿಕೊಂಡಿರುವುದೂ ಸಾಮಾನ್ಯ. ಕುಕ್ಕುಟ ಉದ್ಯಮದ ತ್ಯಾಜ್ಯ ವಿಲೇವಾರಿಯೇ ಒಂದು ದೊಡ್ಡ ಸಮಸ್ಯೆ ಆಗಿದೆ. ನಮ್ಮ ದೇಶದಲ್ಲಿ ಪ್ರತಿ ವರ್ಷ ಸಾವಿರಾರು ಟನ್‌ಗಳಷ್ಟು ತ್ಯಾಜ್ಯ ಉತ್ಪಾದನೆ ಆಗುತ್ತಿದೆ. ಬೆಂಗಳೂರು ಸೇರಿದಂತೆ ದೇಶದ ದೊಡ್ಡ ನಗರಗಳಲ್ಲಿ ಇದೊಂದು ಬಗೆಹರಿಸಲಾಗದ ಸಮಸ್ಯೆಯಾಗಿ, ಪಾಲಿಕೆಯ ಕೋಟ್ಯಂತರ ರೂಪಾಯಿ ಹಣವನ್ನೂ ಕಬಳಿಸುತ್ತಿದೆ. ನ್ಯಾನೋ ತಂತ್ರಜ್ಞಾನದಿಂದಾಗಿ ಕೋಳಿ ಪುಕ್ಕ, ತುಪ್ಪಳ ಈಗ ವರವಾಗಿ ಪರಿಣಮಿಸಿದೆ. ನಂಬಿದರೆ ನಂಬಿ ಬಿಟ್ಟರೆ ಬಿಡಿ, ಪಾದರಕ್ಷೆ ಅದರಲ್ಲೂ ಶೂಗಳ ಉತ್ಪಾದನೆಗೆ ಈ ಕೋಳಿ ಪುಕ್ಕವನ್ನು ಬಳಸಲು ಯೋಜನೆ ಸಿದ್ಧವಾಗಿದೆ.

ಅಚ್ಚರಿಯ ಸಂಗತಿ ಎಂದರೆ, ಇದನ್ನು ಬಳಸುವುದರಿಂದ ಶೂ ಹಾಕಿಕೊಂಡಾಗ ಹೊಮ್ಮುವ ಗಬ್ಬು ವಾಸನೆ ನಿವಾರಿಸಲು ಸಾಧ್ಯವಿದೆ. ಇದರಿಂದ ಇನ್ನು ಮುಂದೆ ನೆಮ್ಮದಿಯಿಂದ ಶೂ ತೊಟ್ಟುಕೊಂಡು ಓಡಾಡಬಹುದು. ವಾಸನೆ ಇಲ್ಲದೆ ಶೂಗಳು ಯಾವತ್ತೂ ತಾಜಾ ಆಗಿರುತ್ತವೆ.

